ಆರ್ ಬಿ ಐ / 2004-05 / 315
ಡಿಸಿಎಂ (ಯೋಜನೆ) ಸಂಖ್ಯೆ ಜಿ-31 / 10-03.00/ 2004-05

ಡಿಸೆಂಬರ್ 27,2004

ಪಟ್ಟಿಯ ಪ್ರಕಾರ ಕರೆನ್ಸಿ ಭಂಡಾರ ನಿರ್ವಹಿಸುತ್ತಿರುವ ಬ್ಯಾಂಕುಗಳು

ಮಾನ್ಯರೇ,

**ನಾಣ್ಯಗಳನ್ನು ಅಂಗೀಕರಿಸದಿರುವುದು**

ಬ್ಯಾಂಕು ಶಾಖೆಗಳು ನಾಣ್ಯಗಳನ್ನು ಅಂಗೀಕಢಿಸುವ ಕುರಿತು ನಮ್ಮ ಪತ್ರ ಡಿಸಿಎಂ ( ಆರ್ ಎಂ ಎಂ ಟಿ) ಸಂಖ್ಯೆ 1181 / 11.37.01 / 2003-04 ದಿನಾಂಕ ಏಪ್ರಿಲ್ 5, 2004 ರಲ್ಲಿ ನಿಮಗೆ ನೀಡಿರುವ ನಿರ್ದೇಶನಗಳನ್ನು / ಸೂಚನೆಗಳನ್ನು ದಯವಿಟ್ಟು ನೋಡಿ. ವಾಣಿಜ್ಯ ಬ್ಯಾಂಕುಗಳ ಶಾಖೆಗಳು ನಾಣ್ಯಗಳನ್ನು ಅಂಗೀಕರಿಸದಿರುವುದರಿಂದ ಸಾರ್ವಜನಿಕರು ಎದುರಿಸುತ್ತಿರುವ ತೊಂದರೆಯನ್ನು ಕುರಿತು ನವೆಂಬರ್ 22, 2004 ರಂದು ಚೆನ್ನೈ ನ ರಿಸರ್ವ್ ಬ್ಯಾಂಕ್ ಸಿಬ್ಬಂದಿ ಕಾಲೇಜಿನಲ್ಲಿ ನಡೆದ ನೀಡಿಕೆ ಕಚೇರಿಗಳ ಪ್ರಾದೇಶಿಕ ಮುಖ್ಯಸ್ಥರ ಮತ್ತು ಹಣದ ಭಂಡಾರ ನಿರ್ವಹಿಸುತ್ತಿರುವ ಬ್ಯಾಂಕುಗಳ ಹಿರಿಯ ಅಧಿಕಾರಿಗಳ ಸಮ್ಮೇಳನದಲ್ಲಿ ಇತರ ವಿಷಯಗಳೊಂದಿಗೆ ಚರ್ಚಿಸಲಾಯಿತು.

2. ಬ್ಯಾಂಕುಗಳ ಶಾಖೆಗಳು ನಾಣ್ಯಗಳನ್ನು ಅಂಗೀಕರಿಸದಿರುವ ಬಗ್ಗೆ ನೇರವಾಗಿ ಹಾಗೂ ಪರೋಕ್ಷವಾಗಿ ದೂರುಗಳು ನಮಗೆ ಬರುತ್ತಲೇ ಇರುವುದರಿಂದ, ವಿನಿಮಯಕ್ಕಾಗಲೀ ಅಥವಾ ಖಾತೆಗಳಲ್ಲಿ ಠೇವಣಿ ಮಾಡುವುದಕ್ಕಾಗಲಿ ತಮ್ಮ ಕೌಂಟರ್‌ಗಳಲ್ಲಿ ಸಲ್ಲಿಸುವಂಥ ಎಲ್ಲ ವರ್ಗದ ನಾಣ್ಯಗಳನ್ನು ಅಂಗೀಕರಿಸುವಂತೆ ನಿಮ್ಮ ಎಲ್ಲ ಶಾಖೆಗಳಿಗೆ ಕೂಡಲೇ ನಿರ್ದೇಶನ ನೀಡುವಂತೆ ಮತ್ತೊಮ್ಮೆ ನಿಮಗೆ ಸೂಚಿಸುತ್ತಿದ್ದೇವೆ. ನಾಣ್ಯಗಳ ವಿನಿಮಯ ಸೌಲಭ್ಯ ಮತ್ತು ಅಂಗೀಕಾರ ಸೌಲಭ್ಯ ಲಭ್ಯವಿರುವ ಬಗ್ಗೆ ಸಾರ್ವಜನಿಕರಿಗೆ ತಿಳಿಸುವ ನೋಟೀಸನ್ನು ಸಾರ್ವಜನಿಕರ ಮಾಹಿತಿಗಾಗಿ ಶಾಖೆಗಳ ಆವರಣಗಳ ಒಳಗೆ ಹಾಗೂ ಹೊರಗೆ ಸೂಕ್ತವಾದ ರೀತಿಯಲ್ಲಿ ಪ್ರದರ್ಶಿಸಲಾಗಿದೆ ಎಂದು ನಾವು ಆಶಿಸುತ್ತೇವೆ.

3. ಕೌಂಟರುಗಳಲ್ಲಿ ಸ್ವೀಕರಿಸಿದ ನಾಣ್ಯಗಳನ್ನು ನಿರ್ವಹಿಸುವುದಕ್ಕೆ ಅನುಕೂಲ ಮಾಡಿಕೊಡುವ ಸಲುವಾಗಿ, ವಿಶೇಷವಾಗಿ ದೊಡ್ಡ ಸಂಸ್ಥೆಗಳಲ್ಲಿ / ದೇವಾಲಯಗಳ ಪಟ್ಟಣಗಳಲ್ಲಿ/ ಶಾಖಾ ಆವರಣಗಳಲ್ಲಿ ಪ್ರತ್ಯೇಕಿಸುವ ಯಂತ್ರಗಳನ್ನು ಅಳವಡಿಸುವ ಬಗ್ಗೆ ನೀವು ಪರಿಗಣಿಸಬಹುದು. ಈ ಹಿಂದೆ ತಿಳಿಸಿರುವಂತೆ, 5 ಪೈಸೆ, 10 ಪೈಸೆ ಮತ್ತು 20 ಪೈಸೆಯ ಅಲ್ಯುಮಿನಿಯಂ ನಾಣ್ಯಗಳನ್ನು, 10 ಪೈಸೆಯ ಅಲ್ಯುಮಿನಿಯಂ ಕಂಚಿನ ನಾಣ್ಯಗಳನ್ನು, 10 ಪೈಸೆಯ ಸ್ಟೇನ್‌ಲೆಸ್ ಸ್ಟೀಲ್ ನಾಣ್ಯಗಳನ್ನು ಮತ್ತು 25 ಪೈಸೆ, 50 ಪೈಸೆ ಮತ್ತು 1 ರೂಪಾಯಿಯ ಕುಪ್ರೋನಿಕಲ್ ನಾಣ್ಯಗಳನ್ನು ಹಾಲಿ ಇರುವ ಕಾರ್ಯ ವಿಧಾನದ ಪ್ರಕಾರ ಮುಂಚಿತವಾಗಿ ಸೂಚನೆ ನೀಡಿ ಮುಂಬೈ / ಕೋಲ್ಕತ/ ಹೈದರಾಬಾದ್ ನಲ್ಲಿರುವ ಭಾರತ ಸರ್ಕಾರದ ಟಂಕಸಾಲೆಗಳಿಗೆ ರವಾನಿಸಬಹುದು.. 25 ಪೈಸೆ , 50 ಪೈಸೆ ಮತ್ತು 1 ರೂಪಾಯಿಯ ಸ್ಟೇನ್‌ಲೆಸ್ ಸ್ಟೀಲ್ ನಾಣ್ಯಗಳನ್ನು ಮತ್ತು 2 ರೂಪಾಯಿಯ ಮತ್ತು 5

ರೂಪಾಯಿಯ ಕುಪ್ರೋನಿಕಲ್ ನಾಣ್ಯಗಳನ್ನು ಮರು ಚಲಾವಣೆಗೊಳಿಸಲು ಪ್ರಯತ್ನಿಸತಕ್ಕದ್ದು. ಆದರೆ ಈ ನಾಣ್ಯಗಳಿಗೆ ಬೇಡಿಕೆಯು ಸಾಕಷ್ಟಿಲ್ಲದಿರುವ ಪಕ್ಷದಲ್ಲಿ ಆಯಾ ವೃತ್ತದ ನೀಡಿಕೆ ಇಲಾಖೆಯನ್ನು ನಾಣ್ಯಗಳನ್ನು ರವಾನಿಸುವ ಬಗ್ಗೆ ಸಂಪರ್ಕಿಸಬಹುದು.

4. ಸಾರ್ವಜನಿಕರಿಗೆ ಯಾವುದೇ ಅನಾನುಕೂಲವಾಗುವುದನ್ನು ತಪ್ಪಿಸುವ ರೀತಿಯಲ್ಲಿ ಸಾರ್ವಜನಿಕರಿಂದ ಯಾವುದೇ ನಿರ್ಬಂಧವಿಲ್ಲದಂತೆ ನಾಣ್ಯಗಳನ್ನು ಅಂಗೀಕರಿಸುವಂತೆ ನಿಮ್ಮ ಎಲ್ಲಾ ಬ್ಯಾಂಕ್ ಶಾಖೆಗಳಿಗೆ ಅಗತ್ಯ ಸೂಚನೆಗಳನ್ನು ನೀಡುವಂತೆ ನಿಮ್ಮನ್ನು ಮತ್ತೊಮ್ಮೆ ಕೋರಲಾಗಿದೆ.

5. ಈ ಪತ್ರ ತಲುಪಿದ್ದಕ್ಕೆ ದಯವಿಟ್ಟು ಸ್ವೀಕೃತಿ ನೀಡಿ ಮತ್ತು ಈ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ನಮಗೆ ಮನನ ಮಾಡಿಕೊಡಿ.

ತಮ್ಮ ವಿಶ್ವಾಸಿ,

**(ಯು. ಎಸ್. ಪಾಲಿವಾಲ್)**
**ಮುಖ್ಯ ಪ್ರಧಾನ ವ್ಯವಸ್ಥಾಪಕರು**

**ಪತ್ರ ಸಂಖ್ಯೆ ಡಿಸಿಎಂ ( ಯೋಜನೆ ) ಸಂಖ್ಯೆ ಜಿ 31 / 10.03.00 / 2004–05 ದಿನಾಂಕ 27ನೇ ಡಿಸೆಂಬರ್ 2004 ನ್ನು ಯಾರಿಗೆ ಬರೆಯಲಾಗಿದೆಯೋ ಆ ಬ್ಯಾಂಕುಗಳ ಪಟ್ಟಿ**

**ಕ್ರಸಂ**

**ಬ್ಯಾಂಕುಗಳ ಹೆಸರು**

**ಕ್ರಸಂ**

**ಬ್ಯಾಂಕುಗಳ ಹೆಸರು**

**ಸಾರ್ವಜನಿಕ ವಲಯ ಬ್ಯಾಂಕುಗಳು**

**ಖಾಸಗಿ ವಲಯ ಬ್ಯಾಂಕುಗಳು**

1.

ಅಲಹಾಬಾದ್ ಬ್ಯಾಂಕ್

1.

ಬ್ಯಾಂಕ್ ಆಫ್ ಪಂಜಾಬ್ ಲಿಮಿಟೆಡ್.

2.

ಬ್ಯಾಂಕ್ ಆಫ್ ಬರೋಡ

2.

ದಿ ಬ್ಯಾಂಕ್ ಆಫ್ ರಾಜಸ್ಥಾನ್ ಲಿಮಿಟೆಡ್

3.

ಬ್ಯಾಂಕ್ ಆಫ್ ಮಹಾರಾಷ್ಟ್ರ

3.

ಕ್ಯಾಥೋಲಿಕ್ ಸಿರಿಯನ್ ಬ್ಯಾಂಕ್ ಲಿಮಿಟೆಡ್

4.

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ

4.

ದಿ ಧನಲಕ್ಷ್ಮಿ ಬ್ಯಾಂಕ್ ಲಿಮಿಟೆಡ್

5.

ದೇನಾ ಬ್ಯಾಂಕ್

5.

ದಿ ಫೆಡರಲ್ ಬ್ಯಾಂಕ್ ಲಿಮಿಟೆಡ್.

6.

ಇಂಡಿಯನ್ ಬ್ಯಾಂಕ್

6.

ಹೆಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್

7.

ಪಂಜಾಬ್ ಮತ್ತು ಸಿಂದ್ ಬ್ಯಾಂಕ್

7

ಐಸಿಐಸಿ ಬ್ಯಾಂಕ್ ಲಿಮಿಟೆಡ್

8.
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ
8
ಐಡಿಬಿಐ ಬ್ಯಾಂಕ್ ಲಿಮಿಟೆಡ್.
9.
ಆಂಧ್ರ ಬ್ಯಾಂಕ್
9
ದಿ ಜಮ್ಮು ಮತ್ತು ಕಾಶ್ಮೀರ ಬ್ಯಾಂಕ್ ಲಿ.,
10.
ಕೆನರಾ ಬ್ಯಾಂಕ್
10.
ದಿ ಕರ್ನಾಟಕ ಬ್ಯಾಂಕ್ ಲಿ.,
11.
ಬ್ಯಾಂಕ್ ಆಫ್ ಇಂಡಿಯಾ
11
ದಿ ಕರೂರ್ ವೈಶ್ಯ ಬ್ಯಾಂಕ್ ಲಿ.,
12.
ಕಾರ್ಪೊರೇಷನ್‌ಬ್ಯಾಂಕ್
12
ದಿ ಲಕ್ಷ್ಮಿ ವಿಲಾಸ್ ಬ್ಯಾಂಕ್ ಲಿ.,
13.
ಇಂಡಿಯನ್ ಓವರ್ ಸೀಸ್ ಬ್ಯಾಂಕ್
13.
ದಿ ಸೌತ್ ಇಂಡಿಯನ್ ಬ್ಯಾಂಕ್ ಲಿ.,
14
ಓರಿಯೆಂಟಲ್ ಬ್ಯಾಂಕ್ ಆಫ್ ಕಾಮರ್ಸ್
14.
ತಮಿಳುನಾಡು ಮರ್ಕೆಂಟೈಲ್
ಬ್ಯಾಂಕ್ ಲಿ.,
15.
ಪಂಜಾಬ್ ನ್ಯಾಷನಲ್ ಬ್ಯಾಂಕ್
15.
ಯುಟಿಐ ಬ್ಯಾಂಕ್ ಲಿ.,
16.
ಸಿಂಡಿಕೇಟ್ ಬ್ಯಾಂಕ್
16.
ದಿ ಐಎನ್‌ಜಿ ವೈಶ್ಯ ಬ್ಯಾಂಕ್ ಲಿ.,

17.
ಯುಕೋ ಬ್ಯಾಂಕ್
17.
ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕ್
18.
ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ
18.
ರಾಜಸ್ಥಾನ್ ಕೋ ಆಪರೇಟಿವ್ ಬ್ಯಾಂಕ್ ಲಿ.,
19.
ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ
20.
ವಿಜಯ ಬ್ಯಾಂಕ್
21.
ಸ್ಟೇಟ್ ಬ್ಯಾಂಕ್ ಆಫ್ ಬಿಕನೇರ್ ಮತ್ತು ಜಯಪುರ್
22.
ಸ್ಟೇಟ್ ಬ್ಯಾಂಕ್ ಆಫ್ ಪಾಟಿಯಾಲ
23.
ಸ್ಟೇಟ್ ಬ್ಯಾಂಕ್ ಆಫ್ ಇಂಡೋರ್
24.
ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್
25.
ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್
26.
ಸ್ಟೇಟ್ ಬ್ಯಾಂಕ್ ಆಫ್ ಮೈಸೂರು
27.
ಸ್ಟೇಟ್ ಬ್ಯಾಂಕ್ ಆಫ್ ಸೌರಾಷ್ಟ್ರ